ಚಾಸಾ-4

ಪ್ರಾಸಾ-7

ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.

**ಸಾಕ್ಷಿದಾರನ ಹೆಸರುಃ ರಾಜಶೇಖರ**

**ತಂದೆಯ ಹೆಸರುಃ ಬಸವರಾಜ ಬಾಣದ**

**ವಯಸ್ಸುಃ 51 ವರ್ಷ**

**ಉದ್ಯೋಗಃ ಸರಕಾರಿ ನೌಕರಿ ಕೃಷಿ ಇಲಾಖೆ**

**ವಾಸಸ್ಥಳಃ ಧಾರವಾಡ**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ. 21.11.2023.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ದಿಃ **21.05.2018** ರಂದು ಧಾರವಾಡ ಗ್ರಾಮಿಣ ಪೋಲಿಸ ಠಾಣೆಯ ಪೋಲಿಸರು ಬಂದು ಒಂದು ಪಂಚನಾಮೆಗೆ ಪಂಚರಾಗುವಂತೆ ನನಗೆ ನೊಟಿಸ ನೀಡಿದ್ದರು. ಸದರಿ ನೊಟಿಸ ನೀಡಿದ ಮೇರೆಗೆ ನಾನು ಧಾರವಾಡ ಗ್ರಾಮಿಣ ಪೋಲಿಸ ಠಾಣೆಗೆ ಹೋದೆ. ಸದರಿ ಪೋಲಿಸ ಠಾಣೆಯಲ್ಲಿ ಪೋಲಿಸರು ಚಾಸಾ**6** ರವರನ್ನು ನನಗೆ ತೋರಿಸಿದ್ದರು. ಸದರಿ ಚಾಸಾ**6** ರವರು ಆತನಿಗೆ ಓರ್ವ ಅನಾಮಧೇಯ ಮಹಿಳೆ ತಾನು ಧಾರವಾಡದ ಎಸ್ ಪಿ ಸಂಗೀತಾ ಎಂದು ಹೇಳಿ ಪೋಲಿಸ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಪ್ರತಿ ಪರಿಕ್ಷಾರ್ಥಿಗಳಿಂದ ತಲಾ ರೂ.**2,000/-** ಗಳನ್ನು ಓರ್ವ ಅನಾರೋಗ್ಯ ಪೀಡಿತ ಮಹಿಳೆಯ ಚಿಕಿತ್ಸೆಗಾಗಿ ಸಂಗ್ರಹಿಸುವಂತೆ ಹೇಳಿದ್ದು ಅದಕ್ಕೆ ಸಂಬಂದಿಸಿದಂತೆ ಚಾಸಾ**6** ರವರ ಬಳಿ ಇದ್ದ ಸ್ಯಾಮಸಂಗ ಮೊಬೈಲನಲ್ಲಿ ಸದರಿ ಕರೆಯ ರೆಕಾರ್ಡಿಂಗ ಇದ್ದು ಅದರ ಸಾಕ್ಯೆದ ಭಾಗವಾಗಿ ಮೊಬೈಲನಲ್ಲಿದ್ದ ಚಿಪ್ ನ್ನು ನನ್ನ ಸಮಕ್ಷಮ ಸದರಿಯವರು ತನಿಖಾಧಿಕಾರಿಯವರಿಗೆ ನೀಡುತ್ತಿದ್ದೆನೆ ಎಂದು ಹೆಳಿ ಸದರಿ ದಿನ ನೀಡಿದರು. ಸದರಿ ಮೆಮೊರಿ ಕಾರ್ಡ ಚಿಪ್ ನ್ನು ಪೋಲಿಸರು ನನ್ನ ಸಮಕ್ಷಮ ಪಡೆದು ಕಂಪ್ಯೂಟರನಲ್ಲಿ ಹಾಕಿ ಚಾಲನೆ ಮಾಡಿದರು. ಸದರಿ ವಾಯ್ಸ ರೆಕಾರ್ಡಿಂಗ ನಲ್ಲಿ ಓರ್ವ ಮಹಿಳೆ ಹಣಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ ಇತ್ತು. ಸದರಿ ವಾಯ್ಸ ರೆಕಾರ್ಡಿಂಗನ್ನು ಪೋಲಿಸರು ಬೆರಳಚ್ಚು ಮಾಡಿ ನನಗೆ ತೋರಿಸಿದರು. ಸದರಿ

ಬೆರಳಚ್ಚುವನ್ನು ಪೋಲಿಸರು ಮದಾಹ್ನ **2.00** ರಿಂದ **4.00** ವರೇಗೆ ಮಾಡಿದರು. ಸದರಿ ಬೆರಳಚ್ಚು ಮಾಡಿದ ದಾಖಲೆಗೆ ಪೋಲಿಸರು ನನ್ನ ಸಹಿಯನ್ನು ಪಡೆದರು.

**2.** ಸದರಿ ದಿನ ಪೋಲಿಸರು ನನಗೆ ನೀಡಿದ ನೊಟಿಸ್ಸನ್ನು ಈಗ ನೊಡುತ್ತಿದ್ದು ಸದರಿ ನೊಟಿಸ್ಸನ್ನು ನಿಪಿ.**12** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.12(ಎ)** ಎಂದು ಗುರುತಿಸಲಾಯಿತು. ಹಾಗೂ ಸದರಿ ದಿನ ಮೆಮೊರಿ ಕಾರ್ಡ ಜಪ್ತಿ ಮಾಡಿಕೊಳ್ಳುವ ಕಾಲಕ್ಕೆ ಜರುಗಿಸಿದ ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**10** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ.10(ಸಿ)** ಎಂದು ಗುರುತಿಸಲಾಯಿತು. ಸದರಿ ದಿನ ಅಮಾನತುಪಡಿಸಿಕೊಂಡ ಮೆಮೊರಿ ಕಾರ್ಡನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಓ **5** ಎಂದು ಗುರುತಿಸಲಾಗಿದೆ.

**3.** ಮರುದಿನ ಪೋಲಿಸರು ನನಗೆ ಮತ್ತೆ ನೊಟಿಸ ನೀಡಿ ಮುದ್ದೆಮಾಲು ಜಪ್ತಿ ಕಾಲಕ್ಕೆ ಪಂಚನಾಗುವಂತೆ ಕೇಳಿಕೊಂಡಿದ್ದರು. ಅದರಂತೆ ನಾನು ಮದ್ಯಾಹ್ನ **3.30** ರಿಂದ **4.00** ರ ಅವಧಿಯಲ್ಲಿ ಸದರಿ ಪೋಲಿಸ ಠಾಣೆಗೆ ಹೊಗಿದ್ದು , ಅಲ್ಲಿ ಓರ್ವ ಕಲ್ಪನಾ ಎಂಬ ಹೆಸರಿನ ಮಹಿಳೆ ಇದ್ದು ಹಾಗೂ ಪೋಲಿಸರು ಇದ್ದರು. ಸದರಿ ಕಲ್ಪನಾ ಎಂಬ ಮಹಿಳೆಗೆ ಪೋಲಿಸರು ಹಿಂದಿನ ದಿನ ಬೆರಳಚ್ಚು ಮಾಡಿದ ಧ್ವನಿ ಸುರುಳಿಯ ದಾಖಲೆಯನ್ನು ಓದಲು ಹೇಳಿದ್ದು ಅದನ್ನು ಪೋಲಿಸರು ನನ್ನ ಸಮಕ್ಷಮ ವಾಯ್ಸ ರೆರ್ಕಾಡರ್ ಇನ್ಸುಟ್ರುಮೆಂಟ ನಲ್ಲಿ ಮೂರು ಬಾರಿ ರೆಕಾರ್ಡ ಮಾಡಿಕೊಂಡರು. ಹಾಗೂ ಪೋಲಿಸರು ಸದರಿ ಕಲ್ಪನಾ ಎಂಬ ಮಹಿಳೆಯ ದ್ವನಿಯನ್ನು ವಾಯ್ಸ ರೆಕಾರ್ಡರನಿಂದ ಕಂಪ್ಯೂಟರಗೆ ಹಾಕಿ ಅದರಿಂದ ಸಿಡಿಗೆ ವರ್ಗಾಯಿಸಿಕೊಂಡರು. ಹಾಗೂ ಸದರಿ ಸಿಡಿಯ ಮೂರು ನಕಲುಗಳು ತಯಾರಿಸಿದರು. ಹಾಗೂ ಸದರಿ ಈ ಕೆಲಸ ಸಂಜೆ **4.00** ರಿಂದ **5.00** ವರೆಗೆ ಆಯಿತು. ಹಾಗೂ ಸದರಿ ಸಿಡಿಗಳನ್ನು ಬಟ್ಟೆಯಲ್ಲಿ ಸೀಲು ಮಾಡಿ ನನ್ನ ಹಾಗೂ ಇತರ ಪಂಚರ ಸಹಿ ಪಡೆದರು. ಸದರಿ ದಿನ ನನಗೆ ಪೋಲಿಸರು ನೊಟಿಸ ನೀಡಿದ್ದರು ಸದರಿ ನೊಟಿಸ್ಸನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**5** ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು **ನಿಪಿ.5(ಬಿ)** ಎಂದು ಗುರುತಿಸಲಾಯಿತು. ಸದರಿ ದಿನ ಸದರಿ ಕಲ್ಪನಾ ಎಂಬುವವರಿಂದ ಮಾದರಿ ಧ್ವನಿ

ಸುರಳಿ ಸಿಡಿ ಜಪ್ತಿ ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿದ್ದು ಸದರಿ ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**13** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.13(ಎ)** ಎಂದು ಗುರುತಿಸಲಾಯಿತು. ಹಾಗೂ ಸದರಿ ದಿನ ನನ್ನ ಸಮಕ್ಷಮ ಸದರಿ ಧ್ವನಿ ಸುರುಳಿಯನ್ನು ಮೂರು ಸಿಡಿಗೆ ವರ್ಗಾಯಿಸಲಾಗಿದ್ದು ಸದರಿ ಮೂರು ಸಿಡಿಗಳನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅವುಗಳನ್ನು **ಎಂಓ 6 ರಿಂದ 8** ಎಂದು ಗುರುತಿಸಲಾಯಿತು.

**4.** ನಂತರ ಸದರಿ ಕಲ್ಪನಾ ಎಂಬ ಮಹಿಳೆ ಸದರಿ ಕರೆ ಮಾಡಲು ಬಳಸಿದ ಮೊಬೈಲ ಫೊನನ್ನು ತೊರಿಸುವೆ ಎಂದು ನನ್ನನ್ನು ಹಾಗೂ ಪೋಲಿಸರು ಮಾಳಾಪೂರದ ರಾಜನಗರದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೊಗಿ ಸದರಿ ಮನೆಯ ಬಳಿ ಹೊಗಿ ಫೋಟೊ ತೆಗೆಯಲಾಗಿದ್ದು , ಹಾಗೂ ಸದರಿ ಮಹಿಳೆ ತನ್ನ ಬಳಿ ಇದ್ದ ಪರಿಕ್ಷಾರ್ಥಿಗಳ ಪಟ್ಟಿಯನ್ನು ತೋರಿಸಿದರು. ಹಾಗೂ ಅವರ ಬಳಿ ಇದ್ದ ಒಂದು ಫೊನನ್ನು ತೋರಿಸಿದರು. ಹಾಗೂ ಸದರಿ ಮೊಬೈಲಗೆ ಸಂಬಂದಿಸಿದ ಒಂದು ಸಿಮ್ ನ್ನು ನೀಡಿದರು. ಪೋಲಿಸರು ನಮ್ಮ ಸಮಕ್ಷಮ ಸದರಿ ವಸ್ತುಗಳನ್ನು ಅಮಾನತುಪಡಿಸಿಕೊಂಡರು. ಸದರಿ ವಸ್ತುಗಳನ್ನು ಸಂಜೆ 5.30 ರಿಂದ 6.30 ವರೆಗೆ ಪಂಚನಾಮೆ ಜರುಗಿಸುವ ಮೂಲಕ ಅಮಾನತುಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಗೆ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿ ನಿಪಿ.6 ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ನಿಪಿ.6(ಬಿ)** ಎಂದು ಗುರುತಿಸಲಾಯಿತು. ಹಾಗೂ ಸದರಿ ಸ್ಥಳದಲ್ಲಿ ತೆಗೆದ ಫೋಟೊ ಗಳನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.**7** ರಿಂದ **9** ಎಂದು ಗುರುತಿಸಲಾಗಿದೆ. ಸದರಿ ದಿನ ಅಮಾನತುಪಡಿಸಿಕೊಂಡ ಮೊಬೈಲನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಓ **1** ಎಂದು ಗುರುತಿಸಲಾಗಿದೆ. ಹಾಗೂ ಸದರಿ ದಿನ ಅಮಾನತುಪಡಿಸಿಕೊಂಡ ಸಿಮ್ ನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಓ **4** ಎಂದು ಗುರುತಿಸಲಾಗಿದೆ. ಹಾಗೂ ಸದರಿ ದಿನ ಸದರಿ ಕಲ್ಪನಾ ಎಂಬುವವರಿಂದ ಅಮಾನತುಪಡಿಸಿಕೊಂಡ ಪಟ್ಟಿಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಓ **2** ಎಂದು ಗುರುತಿಸಲಾಗಿದೆ. ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಇರುವ **1** ನೇ ಆರೋಪಿಯನ್ನು ನೋಡಿ ಸದರಿ ದಿನ ಎಂಓ **1** ರಿಂದ **4** ನೀಡಿದ ವ್ಯಕ್ತಿ ಅವರೇ

ಎಂದು ಗುರುತಿಸಿರುತ್ತಾರೆ. ಸದರಿ ದಿನ ಪಂಚನಾಮೆ ಕಾಲಕ್ಕೆ ನನ್ನೊಂದಿಗೆ ಚಾಸಾ5 ರವರು ಸಹ ಇದ್ದರು.

**ಪಾಟೀಸವಾಲು : ಆರೋಪಿತರ ಪರ ಶ್ರೀ ಎ ಎಸ ಶಿಂಧೆ ವಕೀಲರಿಂದ**

1. ನಾನು ಎಸಿಬಿ ಕೇಸಿಗೆ ಸಂಬಂದಿಸಿದಂತೆ ಒಂದು ಪ್ರಕರಣದಲ್ಲಿ ಪಂಚನಾಗಿದ್ದು ಹಾಗೂ ಈ ಪ್ರಕರಣಕ್ಕೆ ಸಂಬಂದಿಸಿದಂತೆ ಒಮ್ಮೆ ಪಂಚನಾಗಿ ಸಹಿ ಮಾಡಿರುತ್ತೇನೆ. ನನಗೆ ಪಂಚನಾಮೆಯ ಬಗ್ಗೆ ಮಾಹಿತಿ ಇಲ್ಲ. ನನಗೆ ಪಂಚನಾಮೆಯನ್ನು ಬರೆಯಿಸುವ ಅಭ್ಯಾಸ ಇಲ್ಲ. ದಿಃ 21.05.2018 ರಂದು ಪೋಲಿಸರು ನನಗೆ ನೊಟಿಸ ನೀಡಿದ್ದರು. ನಮ್ಮ ಕಚೇರಿಯಲ್ಲಿ ನಮ್ಮ ಮೇಲಾಧಿಕಾರಿ ಡೆಪ್ಯೂಟಿ ಡೈರೆಕ್ಟರ್ ಅಫ್ ಅಗ್ರಿಕಲ್ಚರ 1. ನಮ್ಮ ಕಚೇರಿಯಲ್ಲಿ ನಾವು ಮೂಮೆಂಟ ರೆಜಿಸ್ಟರ ನಿರ್ವಹಿಸುತ್ತೇವೆ ಎಂದರೆ ಸರಿ. ಸದರಿ ಮೂಮೆಂಟ ರೆಜಿಸ್ಟರನಲ್ಲಿ ನಾವು ಯಾವ ಕೆಲಸಕ್ಕೆ ಕೆಲಸದ ಸ್ಥಳದಿಂದ ಹೊರಡುತ್ತಿದ್ದೆವೆ ಹಾಗೂ ಹೊರಡುವ ಸಮಯ ಮತ್ತು ಸದರಿ ಕೆಲಸದ ಸ್ಥಳಕ್ಕೆ ತರುಗಿ ಯಾವ ಸಮಯಕ್ಕೆ ಬಂದೆವು ಎಂದು ನಮೂದಿಸುತ್ತೇವೆ ಎಂದರೆ ಸರಿ. ಚಾಸಾ5 ಸಹ ಸಾಕಷ್ಟು ಎಸಿಬಿ ಪ್ರಕರಣಗಳಲ್ಲಿ ಪಂಚರಾಗಿ ನನ್ನ ಜೊತೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ನಾನು ಪೋಲಿಸರ ಖಾಯಂ ಪಂಚರು ಎಂದರೆ ಸರಿಯಲ್ಲ.

2. ನಮ್ಮ ಕರ್ತವ್ಯ ಅವಧಿಯಲ್ಲಿ ನಾವು ಕಚೇರಿ ಬಿಟ್ಟು ಹೊರಗಡೆ ಹೋಗಬೇಕಾದರೇ ನಮ್ಮ ಮೇಲಾಧಿಕಾರಿಯ ಪರವಾನಿಗೆ ಪಡೆದು ಹೋಗಬೇಕಾಗುತ್ತದೆ ಎಂದರೆ ಸರಿ. ದಿಃ 21.05.2018 ರಂದು ಪೋಲಿಸರು ನನಗೆ ನೊಟಿಸ ನೀಡಿದಾಗ ಮದ್ಯಾಹ್ನ 1.30 ಆಗಿತ್ತು. ಸದರಿ ನೊಟಿಸ್ಸನ್ನು ನಾನು ನನ್ನ ಮೇಲಾಧಿಕಾರಿಗಳಿಗೆ ತೊರಿಸಿರುತ್ತೇನೆ. ನನ್ನ ಮೇಲಾಧಿಕಾರಿಗಳು ನನಗೆ ಲಿಖಿತವಾಗಿ ಸದರಿ ಪಂಚನಾಗಿ ಹೋಗುವಂತೆ ಪರವಾನಿಗೆ ನೀಡಿರಲಿಲ್ಲ. ಸದರಿ ದಿನ ನಾನು ಪಂಚನಾಮೆಗೆ ಹೊಗಬೆಕಾದರೇ ಮೂಮೆಂಟ ರೆಜಿಸ್ಟರ ನಲ್ಲಿ ಆ ಬಗ್ಗೆ ನಮೂದು ಮಾಡಿದ್ದನೋ ಇಲ್ಲವೂ ಎಂದು ನೆನಪಿಲ್ಲ. ಸದರಿ ಪಂಚನಾಮೆಗೆ ಹೊಗಲು ನನ್ನ ಮೇಲಾಧಿಕಾರಿಗಳಿಗೆ ನಾನು ಲಿಖಿತವಾಗಿ ಅನುಮತಿ ನೀಡುವಂತೆ ಕೇಳಲಿಲ್ಲ.

ಚಾಸಾ-4
ಪ್ರಾಸಾ-7

3. ದಿಃ 22.05.2018 ರಂದು ಸಹ ಪಂಚನಾಮೆ ಹೊಗಲು ನನ್ನ ಮೇಲಾಧಿಕಾರಿ ಗಳು ನನಗೆ ಲಿಖಿತವಾಗಿ ಅನುಮತಿ ನೀಡಿರಲಿಲ್ಲ ಆದರೇ ನಾನು ಅನುಮತಿ ಕೊಡುವಂತೆ ಅರ್ಜಿ ಸಲ್ಲಿಸಿದ್ದೆ. ದಿಃ 22.05.2018 ರಂದು ನಾನು ನೊಟಿಸ ಪಡೆದಾಗ ಮದ್ಯಾಹ್ನ 3.30 ಆಗಿತ್ತು. ಸದರಿ ದಿನ ನಾನು ಪಂಚನಾಮೆಗೆ ಹೊಗುತ್ತಿದ್ದ ಬಗ್ಗೆ ಮೂಮೆಂಟ ರೆಜಿಸ್ಟರನಲ್ಲಿ ಬರೆದ ಬಗ್ಗೆ ನನಗೆ ನೆನಪಿಲ್ಲ. ಸದರಿ ದಿಃ 21 ಮತ್ತು 22 ಮೇ 2018 ರಂದು ಪಂಚನಾಮೆಗೆ ನಾನು ಕಚೇರಿಯಿಂದ ಹೊದ ನಂತರ ತಿರುಗಿ ಸದರಿ ದಿನ ಕಚೇರಿಗೆ ಬಂದದಿರಲಿಲ್ಲ ಯಾಕೆಂದರೇ ಕಚೆರಿಯ ಅವಧಿ ಮುಗಿದಿತ್ತು. ಸದರಿ ನಮ್ಮ ಕಚೇರಿಯಲ್ಲಿ ಇದ್ದ ಮೂಮೆಂಟ ರೆಜಿಸ್ಟರನಲ್ಲಿ ದಿಃ 21.05.2018 ರಂದು ಪಂಚನಾಮೆ ಮುಗಿಸಿಕೊಂಡು ಬರುವಷ್ಟರಲ್ಲಿ ಕಚೇರಿ ಅವಧಿ ಮುಗಿದಿದ್ದರಿಂದ ಕಚೇರಿಗೆ ಹಾಜರಾಗಲು ಆಗಲಿಲ್ಲ ಎಂದು ಸದರಿ ರೆಜಿಸ್ಟರನಲ್ಲಿ ನಮೂದು ಮಾಡಲಾಗಲಿಲ್ಲ. ಅದೇ ರೀತಿ ದಿಃ 22.05.2018 ರಂದು ಪಂಚನಾಮೆ ಮುಗಿಸಿಕೊಂಡು ಬರುವಷ್ಟರಲ್ಲಿ ಕಚೇರಿ ಅವಧಿ ಮುಗಿದಿದ್ದರಿಂದ ಕಚೇರಿಗೆ ಹಾಜರಾಗಲು ಆಗಲಿಲ್ಲ ಎಂದು ಸದರಿ ರೆಜಿಸ್ಟರನಲ್ಲಿ ನಮೂದು ಮಾಡಲಾಗಲಿಲ್ಲ.

4. ದಿಃ 21.05.2018 ಹಾಗೂ ದಿಃ 22.05.2018 ರಂದು ನಾನು ಧಾರವಾಡ ಗ್ರಾಮಿಣ ಪೋಲಿಸ ಠಾಣೆಗೆ ಹೊಗಿ ಪಂಚನಾಮೆಗೆ ಸಹಕರಿಸಿರುತ್ತೇನೆ ಎಂದು ನನಗೆ ಹಾಜರಾತಿ ಪ್ರಮಾಣ ಪತ್ರ ವನ್ನು ನೀಡಿದ್ದರು. ಸದರಿ ಪೋಲಿಸರು ನೀಡಿದ ನೊಟಿಸಗೆ ನಾನು ದಿನಾಂಕ ನಮೂದಿಸಿ ಸಹಿ ಮಾಡಿರುತ್ತೇನೆ. ಸಮಯವನ್ನು ನಮೂದಿಸಿಲ್ಲ. ಸದರಿ ನೊಟಿಸ್ಸನ್ನು ನಮ್ಮ ಕಚೇರಿಯ ಟಪಾಲಿನಲ್ಲಿ ನಮೂದಿಸಿಕೊಳ್ಳುವ ಮೂಲಕ ಸ್ವಿಕರಿಸಲಿಲ್ಲ. ಸದರಿ ದಿನಾಂಕಗಳಂದು ನಾನು ಪಂಚನಾಮೆಗೆ ಹೊದ ಬಗ್ಗೆ ನಮ್ಮ ಕಚೇರಿಯ ಮೂಮೆಂಟ ರೆಜಿಸ್ಟರನಲ್ಲಿ ನಮಾದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಯಾವುದೇ ಪಂಚನಾಮೆಗೆ ಹೋಗದೆ ಇದುದ್ದರಿಂದ ಸದರಿ ಮೂಮೆಂಟ ರೆಜಿಸ್ಟರನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಪಂಚನಾಮೆಗೆ ಹೊಗಿದ್ದೆ ಆದರೇ ನನ್ನ ಮೇಲಾಧಿಕಾರಿ ಅನುಮತಿ ಪಡೆದು ಸದರಿ ರೆಜಿಸ್ಟರನಲ್ಲಿ ನಮೂದಿಸಿ ಹೊಗುತ್ತಿದ್ದೆ ಎಂದರೆ ಸರಿಯಲ್ಲ.

**ಚಾಸಾ-4**
**ಪ್ರಾಸಾ-7**

5. ಸದರಿ ದಿನ ಪೋಲಿಸರು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡ ಮೆಮೋರಿ ಕಾರ್ಡ ಯಾವ ಕಂಪನಿಯದ್ದು ಹಾಗೂ ಅದರ ಮೇಲೆ ನಮೂದಿಸಿದ ನಂಬರ ನನಗೆ ನೆನಪಿಲ್ಲ. ದಿಃ 21.05.2018 ರಂದು ಪೋಲಿಸರು ಸದರಿ ಮೈಕ್ರೊ ಚಿಪ್ ನ್ನು ಕಾರ್ಡ ರೈಡರ ಗೆ ಹಾಕಿ ನನಗೆ ಚಾಲನೆ ಮಾವಡಿ ತೋರಿಸಿದ್ದು ಹಾಗೂ ನಂತರ ಅದನ್ನು ಅಮಾನತುಪಡಿಸಿಕೊಂಡರು. ಹಾಗೂ ಅದನ್ನು ಸಿಡಿಗೆ ಸದರಿ ದಿನ ವರ್ಗಾಯಿಸಲಿಲ್ಲ. ಸದರಿ ದಿನ ಸದರಿ ಮೆಮೋರಿ ಕಾರ್ಡ ನ್ನು ಸೀಲು ಮಾಡಲು ಬಳಸಿದ ಚಿನ್ನೆ ವ ಗುರುತು ಯಾವುದೇ ಎಂದು ನನಗೆ ಗೊತ್ತಿಲ್ಲ. ದಿಃ 22.05.2018 ರಂದು ಧ್ವನಿ ಸುರುಳಿಯನ್ನು ಸಿಡಿಗೆ ವರ್ಗಾಯಿಸಿ ಸೀಲು ಮಾಡಲು ಬಳಸಿದ ಗುರುತು ಯಾವುದೇ ಎಂದು ನನಗೆ ಹೇಳಲು ಬರುವುದಿಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಗಿದೆ .)

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೊಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.